## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 282 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 06.07.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಪರವಾನಗಿ ಪಡೆದು ಅದರಂತೆ ಮದ್ಯವನ್ನು ಮಾರಾಟ ಮಾಡದೆ ನಿಯಮಗಳನ್ನು ಉಲ್ಲಂಘಿಸಿ ಬೇರೆ ಪರವಾನಗಿ ಮಾನದಂಡದಲ್ಲಿ ಮದ್ಯ ಮಾರಾಟ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಅಬಕಾರಿ ಇಲಾಖೆಯಿಂದ ಮದ್ಯ ಮಾರಾಟಕ್ಕಾಗಿ ವಿವಿಧ ರೀತಿಯ ಸನ್ನದುಗಳನ್ನು ನೀಡಲಾಗುತ್ತಿದ್ದು, ಸದರಿ ಸನ್ನದು ಷರತ್ತುಗಳನ್ವಯವೇ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಆದರೂ, ಕೆಲವು ಸನ್ನದುದಾರರು ಹಾಗೂ ಅವರ ಅಧಿಕೃತ ನೌಕರರು ಸನ್ನದು ಷರತ್ತುಗಳನ್ನು ಉಲ್ಲಂಘಿಸಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸನ್ನದು ಮಳಿಗೆಗಳಲ್ಲಿ ಮಾರಾಟವಾಗುವ ಮದ್ಯವು ನಿಗದಿತ ಅಬಕಾರಿ ಸುಂಕ ಹಾಗೂ ಹೆಚ್ಚುವರಿ ಅಬಕಾರಿ ಸುಂಕ ಪಾವತಿಗೊಳಗಾಗಿರುವ ಹಿನ್ನಲೆಯಲ್ಲಿ ಸರ್ಕಾರದ ರಾಜಸ್ವಕ್ಕೆ ನಷ್ಟ ಉಂಟಾಗುವ ಪ್ರಮೇಯ ಉದ್ಭವಿಸುವುದಿಲ್ಲ.<br><br>ಕಳೆದ 03 ವರ್ಷಗಳಲ್ಲಿ ದಾಖಲಿಸಿದ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳ ಸಂಖ್ಯೆ, ಸನ್ನದು ನಿಲಂಬನೆ/ರದ್ದುಪಡಿಸಿದ ಸಂಖ್ಯೆ ಹಾಗೂ ವಸೂಲಿಸಿದ ದಂಡದ ವಿವರ ಕೆಳಕಂಡಂತಿದೆ. |

| ಅಬಕಾರಿ ಸಾಲು (ಜುಲೈನಿಂದ ಜೂನ್‌ವರೆಗೆ) | ದಾಖಲಿಸಿದ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳ ಸಂಖ್ಯೆ | ಸನ್ನದು ನಿಲಂಬನೆ/ ರದ್ದುಪಡಿಸಿದ ಸಂಖ್ಯೆ | ವಸೂಲಿಸಿದ ದಂಡ (ರೂ. ಕೋಟಿಗಳಲ್ಲಿ) |
|---|---|---|---|
| 2020-21 | 10,969 | 107 | 14.14 |
| 2021-22 | 13,615 | 198 | 24.33 |
| 2022-23 (ಮೇ ಅಂತ್ಯದವರೆಗೆ) | 14,847 | 237 | 9.24 |
| ಒಟ್ಟು | 39,431 | 542 | 47.71 |

(ಆ) ಮದ್ಯ ಮಾರಾಟದಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; ಪ್ರತಿ ವರ್ಷ ಪ್ರತಿಶತ ಎಷ್ಟು ಮದ್ಯ ಮಾರಾಟ ಹೆಚ್ಚಾಗುತ್ತಿದೆ; ಇದರಿಂದ ಮದ್ಯ ವ್ಯಸನಿಗಳ ಸಂಖ್ಯೆ ಸಹ ಸಮಾಜದಲ್ಲಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಈ ಸೇವನೆಯಿಂದ ಮದ್ಯವ್ಯಸನಿಗಳನ್ನು ಹೊರತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಕಳೆದ ಮೂರು ವರ್ಷಗಳಲ್ಲಿ ಭಾರತೀಯ ತಯಾರಿಕಾ ಮದ್ಯ ಮತ್ತು ಬಿಯರ್ ಮಾರಾಟದ ಪ್ರಮಾಣ ಹಾಗೂ ಸಂಗ್ರಹವಾದ ಒಟ್ಟು ಅಬಕಾರಿ ರಾಜಸ್ವದ ವಿವರಗಳು ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ಕ್ರ ಸಂ. | ವರ್ಷ | ಭಾರತೀಯ ತಯಾರಿಕಾ ಮದ್ಯ (ಭಾ.ತ.ಮ) ಮತ್ತು ಬಿಯರ್ (ಲಕ್ಷ ಪೆಟ್ಟಿಗೆಗಳಲ್ಲಿ) | | | ಒಟ್ಟು ಭಾ.ತ.ಮ ಮತ್ತು ಬಿಯರ್ ಮಾರಾಟದಿಂದ ಮಾತ್ರ ಸಂಗ್ರಹವಾದ ರಾಜಸ್ವ (ರೂ. ಕೋಟಿಗಳಲ್ಲಿ) |
|---|---|---|---|---|---|
| | | ಮಾರಾಟ | ಭೌತಿಕ ಹೆಚ್ಚಳ/ ಕಡಿಮ | ಶೇ. ಬೆಳವಣಿಗೆ | |
| 1 | 2020–21 | 821.05 | –69.47 | –7.80% | 22,655.96 |
| 2 | 2021–22 | 928.99 | 107.94 | 13.15% | 25,646.40 |
| 3 | 2022–23 | 1089.12 | 160.13 | 17.24% | 29,124.45 |

ಮದ್ಯ ಮಾರಾಟದ ಹೆಚ್ಚಳದಿಂದ ಮದ್ಯ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಇಲಾಖೆಯಿಂದ ಯಾವುದೇ ಅಧ್ಯಯನವನ್ನು ಕೈಗೊಂಡಿರುವುದಿಲ್ಲ. ಇಲಾಖೆಯು ಮದ್ಯದ ತಯಾರಿಕೆ, ಸಾಗಾಣಿಕೆ, ಸ್ವಾಧೀನತೆ, ಮಾರಾಟ ಮತ್ತು ಇತರೆ ವ್ಯಾಪಾರ ಚಟುವಟಿಕೆಗಳನ್ನು ನಿಯಂತ್ರಿಸುವ ಮೂಲಕ ಅಬಕಾರಿ ನೀತಿಗಳ ಮತ್ತು ಪ್ರಕ್ರಿಯೆಗಳನ್ನು ಜಾರಿಗೊಳಿಸಿ ತೆರಿಗೆ ಸಂಗ್ರಹಣೆಯಲ್ಲಿ ನಿಗಾವಹಿಸುತ್ತದೆ.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ವತಿಯಿಂದ ಮದ್ಯ ಹಾಗೂ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಹಾಗೆಯೇ, ಇಲಾಖೆಯ ಅಧಿಕಾರಿಗಳು ನಡೆಸುವ ಗ್ರಾಮ ಹಾಗೂ ವಾರ್ಡ್ ಸಭೆಗಳಲ್ಲಿಯೂ ಕೂಡ ಕುಡಿತದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ತಿಳಿ ಹೇಳಲಾಗುತ್ತಿದೆ.

**ಆಇ 28 ಇಎಲ್‌ಕ್ಯೂ 2023**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು